


ಅನೇಕ ವಿಚಾರಗಳನ್ನು ತೆರೆದಿಡುತ್ತಾ ಸಾಗುತ್ತದೆ. ನಮಾಜ್ ಎಂದರೇನೆಂದು ನಮಗೆಲ್ಲರಿಗೂ ಗೊತ್ತು. ಅದನ್ನು ಎಷ್ಟು ಆಳವಾಗಿ ಗ್ರಹಿಸಬೇಕು ಎಂಬ ಕುತೂಹಲದಲ್ಲಿ ಓದಲು ತೊಡಗಿದರೂ ಹೊಸ ವಿಚಾರಗಳು ತೆರೆದುಕೊಳ್ಳುತ್ತವೆ. ಆ ಸಮುದಾಯದಲ್ಲಿ ಆಚರಿಸುವ, 'ಅಂತಿಮ ಕ್ರಿಯೆ'ಯ ವಿಧಿ ವಿಧಾನಗಳನ್ನು ಅರಿಯುವುದು, ಅಲ್ಲಿರುವ ಪ್ರಾರ್ಥನೆಗಳನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆ ನನಗೆ ಹೊಸದೇ ಆಗಿದ್ದವು. ನಾವು ನಮ್ಮ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಸೇರಿದಂತೆ ಅನೇಕ ಪುರಾಣ ಕಥೆಗಳ ಬಗ್ಗೆ ತಿಳಿದುಕೊಂಡು, ಅದರ ಗ್ರಹಿಕೆಯ ಆಧಾರದಲ್ಲಿ ಚರ್ಚೆಗಳನ್ನು ಮಾಡುತ್ತೇವೆ. ಮುಸ್ಲಿಂ ಸಮುದಾಯದಲ್ಲಿಯೂ ಅಪಾರವಾದ ಪೌರಾಣಿಕ ಕಥೆಗಳಿವೆ. ಇತಿಹಾಸ, ಜಾನಪದ ಎಂದೆಲ್ಲ ವೈವಿಧ್ಯದ ಸಾಹಿತ್ಯವಿದೆ. ಅವೆಲ್ಲ ನಮಗೆ ಯಾಕೆ ಗೊತ್ತಿಲ್ಲ ಎಂದು ಅಚ್ಚರಿಯಾಗುತ್ತದೆ. ಹೀಗೆ ನಾನು ಕಥೆಗಳ ಸುತ್ತ ಕೆಲಸ ಮಾಡುತ್ತ ಅನೇಕ ವಿಷಯಗಳನ್ನು ಕಲಿತೆ.

◆ **ಜಾಗತಿಕ ವಿದ್ಯಮಾನಗಳ ಹಿನ್ನೆಲೆಯಲ್ಲಿ ಮತ್ತು ಭಾರತೀಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೋಡುವುದಾದರೆ 'ಹಾರ್ಟ್ ಲ್ಯಾಂಪ್' ಕಥಾಸಂಕಲನದಲ್ಲಿರುವ ಕಥೆಗಳ ಮಹತ್ವವನ್ನು ಹೇಗೆ ಗುರುತಿಸುತ್ತೀರಿ?**

ಕಥೆಗಳೆಂದರೆ ಕಥೆಗಳು. ಅವು ಎಲ್ಲ ಕಾಲದಲ್ಲಿಯೂ, ಸಾಂಸ್ಕೃತಿಕ ಹಿನ್ನೆಲೆಯಲ್ಲಿಯೂ ಕಥೆಗಳಾಗಿ ನಿಲ್ಲುತ್ತವೆ. ನಾವು ಅವುಗಳನ್ನು ಓದುತ್ತ ಹೇಗೆ ಗ್ರಹಿಸುತ್ತೇವೆ ಎನ್ನುವುದು ಕೂಡ ಮುಖ್ಯವಾಗುತ್ತದೆ. ಇದಕ್ಕೆ ಹೊರತಾಗಿಯೂ 'ಹಾರ್ಟ್‌ಲ್ಯಾಂಪ್' ಕಥಾಸಂಕಲನದ